# 28

# ಸೀನಾಯಿ ಬೆಟ್ಟ ಹಾಗೂ ಚೀಯೋನ್ ಬೆಟ್ಟ

# (12:18-29)

ನಾವು ಈಗ ಇಬ್ರಿಯ ಪತ್ರಿಕೆಯ "ಮಹತ್ವದ ಪ್ರಸ್ತಾಪಕ್ಕೆ" ಬಂದಿದ್ದೇವೆ:[1] ಈ ಭಾಗದಲ್ಲಿ ಸೀನಾಯಿ ಬೆಟ್ಟ ಹಾಗೂ ಚೀಯೋನ್ ಬೆಟ್ಟದ ಕುರಿತು ನೋಡುತ್ತೇವೆ. 12:18-29ರಲ್ಲಿ, ಪ್ರಾಯೋಜನೆ, ಚರ್ಚೆ, ಹಾಗೂ ಎಚ್ಚರಿಕೆಯ ಕುರಿತಾಗಿರುತ್ತದೆ. ಈ ಪತ್ರಿಕೆಯಲ್ಲಿ ಹಳೆ ಒಡಂಬಡಿಕೆಯ ವಿಚಾರಗಳನ್ನು ನೀಡಲಾಗಿದೆ. ಈ ಭಾಗದಲ್ಲಿ ಹಳೆ ಒಡಂಬಡಿಕೆಯ ಕಥೆಗಳು, ವ್ಯಾಖ್ಯಾನಗಳು, ಆದಿಕಾಂಡ, ವಿಮೋಚನಕಾಂಡ, ಧರ್ಮೋಪದೇಶಕಾಂಡದ ಹಾಗೂ ಹಗ್ಗಾಯ ಪುಸ್ತಕಗಳಲ್ಲಿರುವ ಚರಿತ್ರೆಗಳು ಒಳಗೊಂಡಿವೆ. "ದೇವರು ತನ್ನ ಕುರಿತಾದ ಉಲ್ಲೇಖಗಳನ್ನು ವಾಕ್ಯಗಳಲ್ಲಿ ಮಾಡುವಾಗ, ಅದಕ್ಕೆ ವಿಶೇಷ ಗಮನವನ್ನು ನೀಡಿರಿ!"[2] ಎಂದು ಚಾರ್ಲ್ಸ್ ಹೊಡ್ಜೆಯವರು ತಿಳಿಸಿರುವರು.

ಇನ್ನೊಂದು ಪ್ರಮುಖ ಅಂಶವೇನಂದರೆ, ಹೊಸ ಒಡಂಬಡಿಕೆಗಳು *ಉತ್ತಮ ವಾದವುಗಳು* ಎಂದು ಇಬ್ರಿಯ ಪತ್ರಿಕೆಯಲ್ಲಿ ತಿಳಿಸಲಾಗಿದೆ. 12:24ರಲ್ಲಿ, "ಹೊಸ ಒಡಂಬಡಿಕೆಗೆ ಯೇಸು ಮಧ್ಯಸ್ಥನಾಗಿರುವನು" ಎಂದಿರುತ್ತದೆ, ಆತನ ರಕ್ತವು ಹೇಬೇಲನ ರಕ್ತಕ್ಕಿಂತ *ಮುಖ್ಯವಾದದ್ದು* ಎಂದಿರುತ್ತದೆ (ಒತ್ತಿ ಹೇಳಿದ್ದು ನನ್ನದು). ಅಂದರೆ ಯೇಸು ಉತ್ತಮವಾದ ಮಧ್ಯಸ್ತನು ಹಾಗೂ ಆತನ ರಕ್ತ ಇತರೆ ಯಜ್ಞಗಳಿಂದ ಪ್ರಮುಖವಾದದ್ದು ಎಂಬ ಅರ್ಥವಾಗಿದೆ. ಹಳೆ ಒಡಂಬಡಿಕೆಯ ರಕ್ತವು ಜನರನ್ನು "ಪರಿಪೂರ್ಣರನ್ನಾಗಿ ಮಾಡಲಿಲ್ಲ, ಹೊಸ ಒಡಂಬಡಿಕೆಯ ರಕ್ತವು ಪರಿಪೂರ್ಣ ಮಾಡುತ್ತದೆ" (ಯೇಸುವಿನ ರಕ್ತ) (ವಚನ 23).

*ಉತ್ತಮವಾದ* ಒಡಂಬಡಿಕೆಯನ್ನು ಹೊಂದಿಕೊಳ್ಳಿರಿ ಎಂಬುದು ಈ ಪತ್ರಿಕೆಯು ಪ್ರಮುಖ ತಾತ್ಪರ್ಯವಾಗಿದೆ. ಸೀನಾಯಿ ಬೆಟ್ಟ ಹಳೆ ಒಡಂಬಡಿಕೆಗೆ ಗುರುತಾಗಿದ್ದರೆ, ಚೀಯೋನ್ ಬೆಟ್ಟ ಹೊಸ ಒಡಂಬಡಿಕೆಗೆ ಗುರುತಾಗಿದೆ ಈ ಎರಡು ಬೆಟ್ಟಗಳ ನಡುವೆ ಇರುವ ಕೆಲವು ವ್ಯತ್ಯಾಸಗಳನ್ನು ಈ ಪಾಠದಲ್ಲಿ ಗಮನಿಸೋಣ, ನಂತರ ವಾಕ್ಯದ ಅಂತ್ಯಭಾಗದಲ್ಲಿರುವ ಸವಾಲುಗಳನ್ನು ಗಮನಿಸೋಣ.

## ವ್ಯತ್ಯಾಸಗಳು (12:18-29)

ತನ್ನ ಓದುಗರು "ಸೀನಾಯಿ ಬೆಟ್ಟದ ಬಳಿಗೆ ಬಾರದೆ" (ವಚನ 18). "ಚೀಯೋನ್ ಬೆಟ್ಟದ ಬಳಿ ಬಂದಿರುವರು" ಎಂದು ಬರಹಗಾರನು ತಿಳಿಸಿರುವನು (ವಚನ 22). ಚೀಯೋನ್ ಪರ್ವತಕ್ಕೆ ಬನ್ನಿರಿ ಎಂದರೆ "ಕ್ರೈಸ್ತರಾಗಿರಿ" ಎಂಬದೇ.

### ಚೀಯೋನ್ ಬೆಟ್ಟ

ಮೂಲ ಓದುಗರು ಯುದಾಯ ಮತಕ್ಕೆ ಹಿಂದಿರುಗುವ ಪ್ರಯತ್ನ ಮಾಡುತ್ತಿದ್ದರು. ಸೀನಾಯಿ ಬೆಟ್ಟದ ಮೇಲೆ ಸ್ವೀಕರಿಸಿದ ದಶಾಜ್ಞೆಗಳ ವಿಚಾರವು ಇಸ್ರಾಯೇಲ್ಯರ ಗುರುತರ ಸಂಗತಿಯಾಗಿತ್ತು. ವಚನ 18 ರಿಂದ 21ರಲ್ಲಿ ಆ ಘಟನೆಯ ಕುರಿತು ನೋಡುತ್ತೇವೆ (ವಿಮೋಚನಕಾಂಡ 19:20, 19; ಧರ್ಮೋಪದೇಶಕಾಂಡ 4:11, 12; 5:23; 9:19). ಆ ಸಮಯದಲ್ಲಿ ಅಲ್ಲಿ ಜರುಗಿದ ಸಂಗತಿ ಏನು?

(1) *ಧೈಹೀಕವಾದದ್ದು/ಲೌಕೀಕವಾದದ್ದು.* ಸೀನಾಯಿ ಎಂಬುದು "ಮುಟ್ಟಬಹುದಾದ"

ಬೆಟ್ಟವಾಗಿತ್ತು (ವಚನಗಳು 18, 20). ಈ ವಿಚಾರವನ್ನು ಮೋಶೆಯು ತಾನು ಈ ಲೋಕದಲ್ಲಿ ಇರುವಾಗಲೇ ಹೇಳಿದ್ದನು (ವಚನ 25).

(2) *ಅದನ್ನು ಮುಟ್ಟಲು ಅಸಾಧ್ಯವಾಗಿತ್ತು.* ಆ ಬೆಟ್ಟವನ್ನು ಮುಟ್ಟಬಹುದಾಗಿದ್ದರೂ, ಆ ಸಮಯದಲ್ಲಿ ಅದನ್ನು ಮುಟ್ಟ ಬಾರದಿತ್ತು (ವಚನ 20). ಜನರು ಆ ಬೆಟ್ಟದ "ಸಮೀಪಕ್ಕೆ" ಬಂದರು, ಅದನ್ನು ಮುಟ್ಟಿದ್ದೆ ಆಗಿದ್ದರೆ ಮರಣಕ್ಕೆ ತುತ್ತಾಗುತ್ತಿದ್ದರು!

(3) *ಭಯಗ್ರಸ್ತವಾಗಿತ್ತು.* ಅಲ್ಲಿ ಇದ್ದ ಶಕ್ತಿಯ ಬಗ್ಗೆ ಯೋಚಿಸಿರಿ (ವಚನಗಳು 18, 19, 21). ಭಯಗ್ರಸ್ತರಾದ ಜನರ ಬಗ್ಗೆ ಆಲೋಚಿಸಿರಿ (ವಚನಗಳು 19, 20). "ಮೋಶೆ ಯು ಸಹ" ನನಗೆ ಬಹು ಭಯವಾಗುತ್ತದೆ ಅಂದನು (ವಚನ 21ಬಿ).

(4) *ತಾತ್ಕಾಲಿಕವಾದದ್ದು.* ಆತನ ಧ್ವನಿಯು ಭೂಮಿಯನ್ನು ಕದಲಿಸಿತು (ವಚನ 26) ಇಬ್ರಿಯ ಪತ್ರಿಕೆಯನ್ನು ಬರೆಯುವ ಸಮಯದಲ್ಲಿಯೂ, ಆತನ ಸ್ವರವು ಸರ್ವವನ್ನು ನಡುಗಿಸುತ್ತಿತ್ತು (ವಚನ 26). ಧೈಹೀಕವಾದ ಅಥವಾ ಲೌಕೀಕವಾದ ಯಾವುದೇ ಸಂಗತಿಗ ಳಾಗಿದ್ದರು, ಅವುಗಳು ಬದಲಾಗುವ ಪ್ರಗತಿಯಲ್ಲಿದ್ದವು.

ಪುನಃ, ಸೀನಾಯಿ ಬೆಟ್ಟದ ಪರಿಸ್ಥಿತಿಯನ್ನು ಗಮನಿಸಿರಿ (ಇಬ್ರಿಯ ಕ್ರೈಸ್ತರು ಈ ವಿಧವಾದ ಒಡಂಬಡಿಕೆಗಳ ಬಳಿಗೆ ಬಂದವರಾಗಿರಲಿಲ್ಲ). ಆ ಸ್ಥಳದಲ್ಲಿ ಅವರಿಗೆ ಯಾವುದೇ ಒಡಂಬಡಿಕೆಗಳನ್ನು ಅವರು ಹೊಂದಿರಲಿಲ್ಲ.

**ಚೀಯೋನ್ ಬೆಟ್ಟ**[3]

ಚೀಯೋನ್ ಬೆಟ್ಟವನ್ನು ಯಾವ ವಿಧದಲ್ಲಿ ವರ್ಣಿಸೋಣ? ಸೀನಾಯಿ ಬೆಟ್ಟದಂತೆಯೇ, ಚೀಯೋನ್ ಬೆಟ್ಟವನ್ನು ಸಹ ವಿಧವಿಧವಾಗಿ ವರ್ಣಿಸಬಹುದು:

(1) *ಆತ್ಮೀಕ ಹಾಗೂ ಪರಲೋಕ.* ಕ್ರೈಸ್ತರಾದ ನಾವು ಒಂದು ಪಟ್ಟಣದ ಬಳಿ ಬಂದಿದ್ದೇವೆ. ಅದು ಯಾವ ಪಟ್ಟಣ? (ವಚನ 22). ಅಸ್ತಿವಾರವುಳ್ಳ, ದೇವರೇ ನಿರ್ಮಿಸಿದ ಪಟ್ಟಣವಾಗಿದೆ (11:10). ನಾವುಗಳು *ಪರಲೋಕದ* ಯೆರೂಸಲೇಮಿಗೆ ಬಂದಿದ್ದೇವೆ (12:22; ಒತ್ತಿ ಹೇಳಿದ್ದು ನನ್ನದು). ನಾವುಗಳು ಕರ್ತನ ಸಭೆಯಾಗಿರುವದರಿಂದ, "ನಮ್ಮ ಹೆಸರುಗಳನ್ನು ಪರಲೋಕ ದಲ್ಲಿ ದಾಖಲು ಮಾಡಲಾಗಿದೆ" (ವಚನ 23).

(2) *ಅದರ ಸಮೀಪಕ್ಕೆ ಬರಬಹುದು.* "ನಾವುಗಳು ದೇವರ ಹಾಗೂ ಯೇಸುವಿನ ಬಳಿಗೆ ಬಂದಿದ್ದೇವೆ" (ವಚನಗಳು 23, 24). ಸಿದ್ಧಿ ಹೊಂದಿರುವ ಆತ್ಮಗಳ ಬಳಿಗೂ ಬಂದಿದ್ದೇವೆ (ವಚನ 23). ಆದ್ದರಿಂದ ದೇವರಿಗೆ ನಾವುಗಳು ಮಹಾಗೌರವವನ್ನು ತೋರಬೇಕು (ವಚನಗಳು 28, 29), ಹಾಗೂ ನಾವುಗಳು ದೇವರ ಸನ್ನಿಧಿಗೆ ಪ್ರವೇಶ ಮಾಡಿದ್ದೇವೆ (ಯಾಕೋಬ 4:8; ಇಬ್ರಿಯ 7:19).

(3) *ಭರವಸ ಹಾಗೂ ಪ್ರೇರಿತರಾದ.* ನಾವುಗಳು ನಡುಗುವ, ಭಯವಾಗುವ ಹಾಗೂ ಹೊಗೆ ತುಂಬಿರುವ ಬೆಟ್ಟದ ಬಳಿಗೆ ಬಾರದೆ 12:22-24ರಲ್ಲಿ, ವಿವರಣೆ ನೀಡಿರುವ ಸ್ಥಳಕ್ಕೆ ಬಂದಿದ್ದೇವೆ.

> ಆದರೆ ನೀವು ಚೀಯೋನ್ ಪರ್ವತಕ್ಕೂ ಜೀವಸ್ವರೂಪನಾದ ದೇವರ ಪಟ್ಟಣವಾಗಿ ರುವ ಪರಲೋಕದ ಯೆರೂಸಲೋಮಿಗೂ ಉತ್ಸವ ಸಂಘದಲ್ಲಿ ಕೂಡಿರುವ ಕೋ ಟ್ಯನು ಕೋಟಿ ದೇವದೂತರ ಬಳಿಗೂ ಪರಲೋಕ ದಲ್ಲಿ ಹೆಸರು ಬರಸಿಕೊಂಡಿರುವ ಚೊಚ್ಚಲಮಕ್ಕಳ ಸಭೆಗೂ ಎಲ್ಲರಿಗೆ ನ್ಯಾಯಾಧಿಪತಿಯಾಗಿರುವ ದೇವರ ಬಳಿಗೂ ಸಿದ್ಧಿಗೆ ಬಂದಿರುವ ನೀತಿವಂತರ ಆತ್ಮಗಳ ಬಳಿಗೂ ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿರುವ ಯೇಸುವಿನ ಬಳಿಗೂ ಹೇಬೆಲನ ರಕ್ತಕ್ಕಿಂತ ಹಿತಕರವಾಗಿ ಮಾತಾಡುವ ಪ್ರೋಕ್ಷಣ ರಕ್ತದ ಬಳಿಗೂ ಬಂದಿದ್ದೀರಿ.

"ಎಂಥ ಭಯಂಕರ!" ಎಂದು ಹೇಳದೆ, "ಎಂಥಾ ಅದ್ಭುತ!" ಎಂದು ಹೇಳುತ್ತೇವೆ.

(4) *ನಿತ್ಯವಾದ/ದೃಢವಾದ.* ನಾವುಗಳು ಕದಲಿಸಲಾರದ ರಾಜ್ಯಕ್ಕೆ ನಾವುಗಳು ಬಂದಿದ್ದೇವೆ (ವಚನ 28ಎ). ಸಭೆಗೆ ಈ ಹೆಸರನ್ನು ನೀಡಲಾಗಿದೆ (ನೋಡಿರಿ ದಾನಿಯೇಲ 2:44). ಪಾತಾಳ ಲೋಕದ ಬಲವು ಅದನ್ನು ಸೋಲಿಸಲಾರದು (ಮತ್ತಾಯ 16:18). ಪರಲೋಕ ರಾಜ್ಯಕ್ಕೆ ಈ ನಾಮಾಂಕಿತವನ್ನು ನೀಡಲಾಗಿದೆ! (ಯೇಸುವನ್ನು ಅಂಗೀಕರಿಸಿರುವದರಿಂದ, ಇಬ್ರಿಯ ಓದುಗರು ನಂಬಿಕೆಯಿಂದ ಹಿಂಜರಿಯಬಾರದಿತ್ತು, ಏಕೆಂದರೆ ಅವರು ಕದಲಿಸಲಾರದ ರಾಜ್ಯವನ್ನು ಹೊಂದಿದ್ದಾರೆ!)

ಚೀಯೋನ್ ಬೆಟ್ಟದ ಕಡೆಗೆ ಪುನಃ ಗಮನವನ್ನು ನೋಡೋಣ. ನೀವು ಈ ಬೆಟ್ಟದ ಬಳಿಗೆ ಬಂದಿರುವಿರಿ. ಇಲ್ಲಿ ದೇವರ ಆಶೀರ್ವಾದವಿದೆ! ಇಲ್ಲಿಯೇ ನಮ್ಮ ಒಪ್ಪಂದಗಳು ಜರುಗಬೇಕು!

## ಸವಾಲುಗಳು (12:24, 25, 28, 29)

ಚೀಯೋನ್ ಬೆಟ್ಟವು, ಸೀನಾಯಿ ಬೆಟ್ಟಕ್ಕಿಂತಲೂ ಮಹತ್ವವುಳ್ಳದ್ದಾಗಿತ್ತು. ಆದದರಿಂದ ಹೊಸ ಒಡಂಬಡಿಕೆಯು, ಹಳೆ ಒಡಂಬಡಿಕೆಗಿಂತ ಮಹತ್ವವುಳ್ಳದ್ದಾಗಿದೆ. ಕ್ರೈಸ್ತತ್ವವು ಯುದಾಯ ಮತಕ್ಕಿಂತಲೂ ಉತ್ತಮವಾಗಿದೆ. ಆತ್ಮ ಪ್ರೇರಿತನಾದ ಬರಹಗಾರನು ಈ ನಿರ್ಣಯದ ಆಧಾರದ ಮೇಲೆ ಎಚ್ಚರಿಕೆಯನ್ನು ನೀಡುತ್ತಿದ್ದಾನೆ.

### ಆತನಿಗೆ ವಿಧೇಯರಾಗಿ, ಆತನನ್ನೇ ಆಲಿಸಿರಿ (12:24, 25, 29)

"ನೀವು ಮಾತಾಡುತ್ತಿರುವಾತನ ಮಾತನ್ನು ಕೇಳಲೊಲ್ಲೆನೆಂದು ಹೇಳಬಾರದು"[4] (ವಚನ 25). ಆತನ ಅಪ್ಪಣೆಯನ್ನು ಕೇಳದೆ ಇರಬಾರದು. ಮೋಶೆಯು ಮಾತನ್ನು ಕೇಳದೆ ಇದ್ದ ಇಸ್ರಾಯೇಲ್ಯರು ಶಿಕ್ಷೆಗೆ ಒಳಗಾದರು. ದೇವರಿಂದಲೇ ದೊರಕಿದ ಒಡಂಬಡಿಕೆಗಳಿಗೆ ಅವಿಧೇಯರಾದವರು ಹೆಚ್ಚಿನ ಶಿಕ್ಷೆಗೆ ಒಳಗಾಗುವರು (ವಚನ 24). ನಾವು ಅದನ್ನು ತಿರಸ್ಕರಿಸಿದರೆ, "ದಹಿಸುವ ಬೆಂಕಿಯಾಗಿರುವ" ದೇವರ ತೀರ್ಪಿಗೆ ಒಳಗಾಗುತ್ತೇವೆ (ವಚನ 29)!

### ಕೃತಜ್ಞತರಾಗಿ, ಆತನನ್ನೇ ಆರಾಧಿಸಿರಿ (12:28)

ದೇವರು ಮಾಡಿರುವ ಸಕಲ ವಿಧವಾದ ಕಾರ್ಯಗಳನ್ನು ನೆನಪುಮಾಡುವಾಗ (ಕದಲಲಾರದ ರಾಜ್ಯವನ್ನು) ನಾವು ಕೃತಜ್ಞರಾಗಿರಬೇಕು. ಅದನ್ನು ಗೌರವಯುತವಾದ ಆರಾಧನೆಯಿಂದ ಸನ್ಮಾನಿಸಬೇಕು (ವಚನ 28).

---

### ಬೋಧಕರಿಗಾಗಿ ಟಿಪ್ಪಣಿ

ಬೋಧನೆಗಾಗಿ, ಈ ಕೆಳಗಿರುವ ಚಾರ್ಟನು ಅನುಸರಿಸಿರಿ.

| ಸೀನಾಯಿ ಬೆಟ್ಟ | ಚೀಯೋನ್ ಬೆಟ್ಟ |
|---|---|
| ಧೈಹೀಕ/ಪ್ರಾಪಂಚಿಕ | ಆತ್ಮೀಕ/ಪರಲೋಕ |
| ಸ್ಪರ್ಷಿಸಲಾರದು | ಸ್ಪರ್ಷಿಸಬಹುದು |
| ಭಯಭೀತಿ | ಭರವಸೆ-ಪ್ರೇರಿತ |
| ತಾತ್ಕಾಲಿಕ | ನಿತ್ಯವಾದ/ದೃಢವಾದ |

ಟಿಪ್ಪಣಿಗಳು

[1]Neil R. Lightfoot, ACU extension class on Hebrews taught in Fort Worth, Texas, 26 October 1985. [2]Charles B. Hodge, Jr., *The Agony & Glory of the Cross* (Searcy, Ark.: Truth for Today World Mission School, 2007), 134. [3]ಯೆರೂಸಲೇಮಿಗೆ ಚೀಯೋನ್ ಬೆಟ್ಟ ಎನ್ನಲಾಗಿದೆ (ನೋಡಿರಿ 1 ಅರಸು 8:1; 2 ಪೂರ್ವಕಾಲವೃತ್ತಾಂತ 5:2).